## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಆಯುಕ್ತರು, ನರಸಿಂಹರಾಜ ಚೌಕ, ಬೆಂಗಳೂರು 560 002**

ಸಂಖ್ಯೆ: ಉ.ಆ(ಹೆಚ್)(2):813:10-11 ದಿನಾಂಕ:28-7-2010

### ಕಛೇರಿ ಆದೇಶ

ವಿಷಯ: ಉದ್ದಿಮೆ ಪರವಾನಗಿ ಮಂಜೂರು ಮಾಡಲು ಕುರಿತು ಹೊರಡಿಸಿರುವ ಅಧಿಕಾರ ಪ್ರತ್ಯಾಯೋಜನೆಯನ್ನು ಭಾಗಷಃ ಮಾರ್ಪಡಿಸುವ ಬಗ್ಗೆ.

ಉಲ್ಲೇಖ: 1) ಪಾಲಿಕೆಯಿಂದ ಹೊರಡಿಸಲಾದ ಅಧಿಕಾರ ಪ್ರತ್ಯಾಯೋಜನೆ ಕುರಿತು ಆಯುಕ್ತರವರ ನಡವಳಿಕೆಗಳು ಸಂಖ್ಯೆ:ಬಿ1(4) ಪಿಆರ್/257/98-99 ದಿನಾಂಕ:10-11-1998

2) ಪಾಲಿಕೆಯಿಂದ ಹೊರಡಿಸಲಾದ ಅಧಿಕಾರ ಪ್ರತ್ಯಾಯೋಜನೆ ಕುರಿತು ಆಯುಕ್ತರವರ ನಡವಳಿಕೆಗಳು ಸಂಖ್ಯೆ:ಬಿ12(1) ಪಿಆರ್/429/09-2000 ದಿನಾಂಕ:24-03-2000

3) ಪಾಲಿಕೆಯ ಕಛೇರಿ ಆದೇಶ ಸಂಖ್ಯೆ:ಬಿ12(4)ಪಿಆರ್/170/08-09 ದಿನಾಂಕ:30-12-2008

4) ಪಾಲಿಕೆಯ ಸುತ್ತೋಲೆ ಸಂಖ್ಯೆ:ಬೆಂ.ಮ.ಪಾ/ಪಿಎಸ್ಆರ್ (ಜಿ)5697/209-10 ದಿನಾಂಕ:10-11-2009

-----

2009-10ನೇ ಸಾಲಿನಲ್ಲಿ ಸುಮಾರು 39,000 ಉದ್ದಿಮೆ ಪರವಾನಗಿಗಳನ್ನು ಬೃ.ಬೆಂ.ಮ.ಪಾಲಿಕೆಯ ವ್ಯಾಪ್ತಿಯ ಎಲ್ಲಾ ವಲಯಗಳಲ್ಲಿ ಆರೋಗ್ಯ ವೈದ್ಯಾಧಿಕಾರಿಗಳು ನೀಡಿದ್ದು, ತ್ಯಾಜ್ಯ ಕರ ಸೇರಿ ಸುಮಾರು 10ಕೋಟಿ ರೂ ಉದ್ದಿಮೆ ಪರವಾನಗಿ ಶುಲ್ಕ ಪಾಲಿಕೆಗೆ ಸಂದಾಯವಾಗಿರುತ್ತದೆ. ಮುಂದಿನ ಸಾಲುಗಳಲ್ಲಿ ಉದ್ದಿಮೆ ಪರವಾನಗಿಯನ್ನು ಸರಳೀಕರಣಗೊಳಿಸಲು ಈಗಾಗಲೇ ಎಲ್ಲಾ ಉದ್ದಿಮೆ ಪರವಾನಗಿಗಳನ್ನು ಗಣಕೀಕೃತ ಗೊಳಿಸಲಾಗಿದ್ದು, ಹಿಂದಿನ ಸಾಲುಗಳಲ್ಲಿ ನೀಡಲ್ಪಟ್ಟಿದ್ದ ಪರವಾನಗಿಗಳನ್ನು ಸಹ ಗಣಕೀಕರಣ ಗೊಳಿಸುವ ನಿಟ್ಟಿನಲ್ಲಿ ಈಗಾಗಲೇ ಸುಮಾರು 22,000 ಪರವಾನಗಿಗಳನ್ನು ಗಣಕೀಕರಣಗೊಳಿಸಲಾಗಿದೆ.

ಬೃ.ಬೆಂ.ಮ.ಪಾಲಿಕೆಯ, ವಲಯ ವ್ಯಾಪ್ತಿ ಸುಮಾರು 800 ಚ.ದ.ಕೀ ಮೀಟರ್ ಇದ್ದು ಕೆ.ಎಂ.ಸಿ ಕಾಯ್ದೆ 1976ರ ಕಲಂ, 353, 354 ಷೆಡ್ಯೂಲ್ 10 ಪ್ರಕಾರ ಪಟ್ಟಿಯಲ್ಲಿ ಸೇರಿಸಲ್ಪಟ್ಟಿರುವ ಸುಮಾರು 4 ಲಕ್ಷ ಉದ್ದಿಮೆಗಳು ಎಲ್ಲಾ ವಲಯಗಳಲ್ಲಿ ಪರವಾನಗಿ ಹೊಂದದೆ ನಡೆಸುತ್ತಿರುವುದಾಗಿ ಮೇಲ್ನೋಟಕ್ಕೆ ಕಂಡು ಬಂದಿದ್ದು, ಇದರಿಂದ ಪಾಲಿಕೆಗೆ ಸಾಕಷ್ಟು ಆರ್ಥಿಕ ನಷ್ಟ ಉಂಟಾಗುತ್ತಿರುತ್ತದೆ. ಶೇಕಡಾ 75 ಭಾಗ ಪರವಾನಗಿ ಇಲ್ಲದೆ ನಡೆಯುತ್ತಿರುವ ಉದ್ದಿಮೆಗಳು ಕರ್ನಾಟಕ ಮುನ್ಸಿಫಲ್ ಕಾಯ್ದೆಯ ವ್ಯಾಪ್ತಿಗೆ ಬರುವುದರಿಂದ ಉದ್ದಿಮೆ ಪರವಾನಗಿ ನೀಡುವುದು ಅವಶ್ಯಕವಾಗಿರುತ್ತದೆ.

...2

ದಿನಾಂಕ:24-3-2000 ಮತ್ತು ದಿನಾಂಕ:10-11-2009 ರ ಸುತ್ತೋಲೆಯನ್ನು ಭಾಗಷ: ಮಾರ್ಪಡಿಸಿ ಈಗಾಗಲೇ ಪಾಲಿಕೆಯ ಸುತ್ತೋಲೆ ಸಂಖ್ಯೆ:ಬೆಂ.ಮ.ನ.ಪಾ: ಪಿಎಸ್.ಆರ್(ಜಿ)5697/2009-10 ದಿನಾಂಕ:10-11-2009 ರ ಉದ್ದಿಮೆ ಪರವಾನಗಿ ನೀಡುವ ಪದ್ಧತಿಯಲ್ಲಿ ಸರಳೀಕರಣ ಗೊಳಿಸಲಾಗಿದೆ.

ಮುಂದುವರೆದು ದಿನಾಂಕ:24-3-2000ದಲ್ಲಿ, ಉದ್ದಿಮೆ ಪರವಾನಗಿಗಳು ಮತ್ತು ನಿಗಧಿತ ಅಶ್ವಶಕ್ತಿಯ ಪರವಾನಗಿ ಮಂಜೂರು ಮಾಡುವ ಅಧಿಕಾರ ಪ್ರತ್ಯಾಯೋಜನೆಯನ್ನು ಭಾಗಷ: ಮಾರ್ಪಡಿಸಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಯುಕ್ತರು, ಶ್ರೀ. ಸಿದ್ದಯ್ಯ ಭಾ.ಆ.ಸೇ, ಆದ ನಾನು 1976ರ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯಿದೆ 66ರ ಪ್ರಕರಣದ ಮೇರೆಗೆ ನನ್ನ ಅಧಿಕಾರವನ್ನು ಕೆಳಕಂಡ ಅಧಿಕಾರಿಗಳಿಗೆ ಯಾವುದೇ ಕಡತವನ್ನು ತರಿಸಿಕೊಂಡು ಪರಿಶೀಲನೆ ಮಾಡುವ ಅಧಿಕಾರವನ್ನು ಕಾಯ್ದಿರಿಸಿಕೊಂಡು ಈ ತಕ್ಷಣದಿಂದ ಜಾರಿಗೆ ಬರುವಂತೆ ಹಿಂದಿನ ಆದೇಶದಲ್ಲಿ ಕೆಲವನ್ನು ಭಾಗಷ: ಮಾರ್ಪಡಿಸಿ, ವಲಯಗಳ ಅಪರ/ಜಂಟಿ ಆಯುಕ್ತರು, ಆರೋಗ್ಯಾಧಿಕಾರಿಗಳು, ಆರೋಗ್ಯ ವೈದ್ಯಾಧಿಕಾರಿಗಳ ಹುದ್ದೆಯ ಮುಂದೆ ನಮೂದಿಸಲಾದ ಅಧಿಕಾರವನ್ನು ಪ್ರತ್ಯಾಯೋಜನೆ ಮಾಡಿರುತ್ತೇನೆ.

| **ಪ್ರತ್ಯಾಯೋಜನೆ ಮೂಲಕ ಅಧಿಕಾರಗಳನ್ನು ನೀಡಲಾಗಿರುವ ಅಧಿಕಾರಿಗಳು** | **ನೀಡಲಾಗಿರುವ ಅಧಿಕಾರಗಳು** |
|---|---|
| ವಲಯಗಳ ಅಪರ/ಜಂಟಿ ಆಯುಕ್ತರು | 400ಕ್ಕಿಂತ ಮೇಲ್ಪಟ್ಟು ಅಶ್ವಶಕ್ತಿವರೆಗಿನ ವಿದ್ಯುಚ್ಛಕ್ತಿ ಪವರ್ ಪರವಾನಗಿಗಳನ್ನು ಮಂಜೂರುಮಾಡುವುದು ನವೀಕರಿಸುವುದು. |
| ಆರೋಗ್ಯಾಧಿಕಾರಿಗಳು | 250ರಿಂದ 400 ಅಶ್ವಶಕ್ತಿವರೆಗಿನ ವಿದ್ಯುಚ್ಛಕ್ತಿ ಪವರ್ ಪರವಾನಗಿಗಳನ್ನು ಮಂಜೂರು ಮಾಡುವುದು ಮತ್ತು ನವೀಕರಿಸುವುದು. |
| ಆರೋಗ್ಯ ವೈದ್ಯಾಧಿಕಾರಿಗಳು | 1) 250 ಅಶ್ವಶಕ್ತಿಯವರೆಗಿನ ವಿದ್ಯುಚ್ಛಕ್ತಿ ಪವರ್ ಪರವಾನಗಿಗಳನ್ನು ಮಂಜೂರು ಮಾಡುವುದು, ನವೀಕರಿಸುವುದು.<br>2) ಉದ್ದಿಮೆ ಗುರುತಿಸಿ ಸ್ಥಳದಲ್ಲಿಯೇ ಅರ್ಜಿ ಪಡೆದು ಹೊಸದಾಗಿ ಉದ್ದಿಮೆ ಪರವಾನಗಿ ನೀಡುವುದು ಅಥವಾ ನವೀಕರಿಸುವುದು. |

ಈ ಮೇಲ್ಕಂಡ ಪ್ರತ್ಯಾಯೋಜನೆಯಂತೆ ಹಿರಿಯ ಆರೋಗ್ಯ ಪರಿವೀಕ್ಷಕರು ಹಾಗೂ ಆರೋಗ್ಯ ವೈದ್ಯಾಧಿಕಾರಿಗಳು ತಮ್ಮ ಅಧಿಕಾರ ವ್ಯಾಪ್ತಿಯ ಪ್ರದೇಶದಲ್ಲಿ ವಿಶೇಷ ಕಾರ್ಯಚರಣೆ ನೆಡೆಸಿ, ಆಯಾ ರಸ್ತೆಗಳಲ್ಲಿ ಉದ್ದಿಮೆಗಳನ್ನು ಕೆ.ಎಂ.ಸಿ ಕಾಯ್ದೆ 353

ಷೆಡ್ಯೂಲ್ 10ರ ಮತ್ತು 354 ರ ಪ್ರಕಾರ ಉದ್ದಿಮೆ ಗುರುತಿಸಿ ಸ್ಥಳದಲ್ಲಿಯೇ ಅರ್ಜಿ ಪಡೆದು ಹೊಸದಾಗಿ ಉದ್ದಿಮೆ ಪರವಾನಗಿ ಅಥವಾ ನವೀಕರಣಗೊಳಿಸಲು ಕ್ರಮ ಕೈಗೊಂಡು ಸ್ಥಳದಲ್ಲಿಯೇ ಶೇಕಡಾ 100 ರಷ್ಟು ದಂಡ ಮತ್ತು ನಿಯಮ 19A ರನ್ವಯ ಘನತ್ಯಾಜ್ಯ ಕರ ಡಿ.ಡಿ ಅಥವಾ ಹಣದ ರೂಪದಲ್ಲಿ ಸಂಗ್ರಹಿಸಿ ರಶೀದಿ ನೀಡಿ ಪರವಾನಗಿಯನ್ನು ಸಹ ಸ್ಥಳದಲ್ಲಿಯೇ ನೀಡತಕ್ಕದ್ದು.

ಈ ರೀತಿ ಹೊಸದಾಗಿ ಉದ್ದಿಮೆ ಪರವಾನಗಿ ನೀಡುವ ವಿಶೇಷ ಕಾರ್ಯಚರಣೆಯು ತಕ್ಷಣದಿಂದ ಜಾರಿಗೆ ಬರಲಿದ್ದು, ಸೆಪ್ಟೆಂಬರ್ ಅಂತ್ಯದವರೆಗೆ ಜಾರಿಯಲ್ಲಿರುತ್ತದೆ. ಈ ಅವಧಿಯಲ್ಲಿ ಪ್ರತಿ ನಿತ್ಯ ವಸೂಲಿ ಮಾಡುವ ಉದ್ದಿಮೆ ಶುಲ್ಕ, ಘನತ್ಯಾಜ್ಯ ಕರವನ್ನು ಸಂಬಂಧಪಟ್ಟ ಲೆಕ್ಕ ಶೀರ್ಷಿಕೆಗೆ ಜಮಾ ಮಾಡಿ ಪ್ರತಿ ನಿತ್ಯ ಆರೋಗ್ಯಾಧಿಕಾರಿಗಳ ಮೂಲಕ ಪ್ರಗತಿಯ ಬಗ್ಗೆ ವರದಿ ಸಲ್ಲಿಸತಕ್ಕದ್ದು. ವಿಶೇಷವಾಗಿ ನರ್ಸಿಂಗ್ ಹೋಂ ಗಳಿಗೆ ಪರವಾನಗಿ ನೀಡುವಾಗ ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ನಿರಾಕ್ಷೇಪಣಾ ಪತ್ರ ಪಡೆದು ಪರವಾನಗಿ ನೀಡತಕ್ಕದ್ದು.

ಈ ಹಿಂದೆ ಹೊರಡಿಲಾದ ಅಧಿಕಾರ ಪ್ರತ್ಯಾಯೋಜನೆಗಳಲ್ಲಿ ಭಾಗಷ: ಮಾರ್ಪಡಿಸಿ ಈ ಆದೇಶವನ್ನು ಹೊರಡಿಸಲಾಗಿದ್ದು ಉಳಿದಂತೆ ಯಾವುದೇ ಬದಲಾವಣೆ ಇರುವುದಿಲ್ಲಾ.

28-7-2010.
ಆಯುಕ್ತರು

ಪ್ರತಿಗಳು:

ಪೂಜ್ಯ ಮಹಾಪೌರರ ಅವಗಾಹನೆಗೆ ಸಲ್ಲಿಸಿದೆ.
ಪೂಜ್ಯ ಉಪ ಮಹಾಪೌರರ ಅವಗಾಹನೆಗೆ ಸಲ್ಲಸಿದೆ.
ವಿಶೇಷ ಆಯುಕ್ತರವರ ಅವಗಾಹನೆಗೆ ಸಲ್ಲಿಸಿದೆ.
ವಲಯಗಳ ಅಪರ /ಜಂಟಿ ಆಯುಕ್ತರವರಿಗೆ ಕಳುಹಿಸಿದೆ.
ಅಪರ ಆಯುಕ್ತರು(ಆರೋಗ್ಯ)/ಉಪ ಆಯುಕ್ತರು(ಆರೋಗ್ಯ)ರವರಿಗೆ ಕಳುಹಿಸಿದೆ.
ಅಪರ ಆಯುಕ್ತರು(ಆಡಳಿತ)ರವರಿಗೆ ಕಳುಹಿಸಿದೆ.
ಉಪ ಆಯುಕ್ತರು(ಆಡಳಿತ)ರವರಿಗೆ ಕಳುಹಿಸಿದೆ.
ಮುಖ್ಯ ಆರೋಗ್ಯಾಧಿಕಾರಿಗಳಿಗೆ ಕಳುಹಿಸಿದೆ.
ಎಲ್ಲಾ ಆರೋಗ್ಯಾಧಿಕಾರಿಗಳು ಕಳುಹಿಸಿದೆ.
ಎಲ್ಲಾ ಉಪ ಆರೋಗ್ಯಾಧಿಕಾರಿಗಳ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
ಎಲ್ಲಾ ಆರೋಗ್ಯ ವೈದ್ಯಾಧಿಕಾರಿಗಳ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ
ಮುಖ್ಯ ಲೆಕ್ಕಾಧಿಕಾರಿಗಳು/ಮುಖ್ಯ ಲೆಕ್ಕಪರಿಶೋಧಕರಿಗೆ ಕಳುಹಿಸಿದೆ.